**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 451/2022**

| | | | |
|---|---|---|---|
| **ಹೆಸರು** | **:** | **ಎ.ಎಸ್. ಪಟೇಲ** | **ಚಾ.ಸಾ. 10** |
| **ತಂದೆಯ ಹೆಸರು** | **:** | **ಸುಕುರ ಪಟೇಲ** | **ಪ್ರಾ.ಸಾ. 2** |
| **ವಯಸ್ಸು** | **:** | **43 ವರ್ಷ** | **ದಿನಾಂಕಃ 02-07-2025** |
| **ಉದ್ಯೋಗ** | **:** | **CPI** | |
| **ವಾಸಸ್ಥಳ** | **:** | **ಗುಲ್ಬರ್ಗಾ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಖುದ್ದು ಸಾಕ್ಷಿಯಿಂದಃ</u>**

ಜನವರಿ 2020 ರಿಂದ ಮಾರ್ಚ 2022 ರವರೆಗೆ ಚಿಂಚೋಳಿ ಪೋಲಿಸ ಠಾಣೆಯಲ್ಲಿ in-charge PSI ಆಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 05-10-2021 ರಂದು ಸಾಯಂಕಾಲ 5.45 ಗಂಟೆಗೆ ಚಾಸಾ-1 ರವರು ಈಗ ನೋಡುತ್ತಿರುವ ದೂರನ್ನು ಸಲ್ಲಿಸಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣೆ ಗುನ್ನೆ ಸಂಖ್ಯೆ 120/2021 ರಲ್ಲಿ ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ನಿಪಿ-1 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರಯನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ದಿನಾಂಕ 06-10-2021 ರಂದು ಬೆಳಗ್ಗೆ 11 ರಿಂದ 12 ಗಂಟೆರವರೆಗೆ ಪ್ರಾಸಾ-1ರವರು ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಜರುಗಿಸಿದ್ದೇನೆ. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-3 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದಿನಾಂಕ 06-10-2021 ರಂದು ಚಾಸಾ-2, 4, 5, 8 ಹಾಗೂ ಚಾಸಾ-9ರವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿನಾಂಕ 08-10-2021 ರಂದು ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದ ಕಾರಣ ಅದರ ಆದೇಶವನ್ನು ಕಡತದಲ್ಲಿ ಅಳವಡಿಸಿದ್ದೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ಸಲ್ಲಿಸಿದ್ದೇನೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ NHR ವಕೀಲರಿಂದಃ</u>**

ದಿನಾಂಕ 05-10-2021 ರಂದು ನಾನು ಐನಾಪುರ ಗ್ರಾಮಕ್ಕೆ ಹೋಗಿರುತ್ತೇನೆ ಎಂದರೆ ಸಾಕ್ಷಿ ನನಗೆ

ನೆನಪಿಲ್ಲ ಎಂದು ನುಡಿಯುತ್ತಾರೆ. ಮಾಣಿಕ ರೆಡ್ಡಿ ಮತು ವೀರಾರೆಡ್ಡಿರವರ ಮಧ್ಯ ಜಗಳವಾದ ಕಾರಣ ನಾನು ರಾಜೀ ಸಂಧಾನಕ್ಕಾಗಿ ಐನಾಪುರ ಗ್ರಾಮಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಉದ್ದೇಶ ಪೂರ್ವಕಕ್ಕಾಗಿ ರಾಜೀಯಾದ ಕಾರಣ ಆರೋಪಿತರಿಗೆ ಸತಾಯಿಸಲು ಚಾಸಾ-1ರವರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹಾಗೂ ಚಾಸಾ-1ರವರ ಮಧ್ಯ ನಾನು ರಾಜೀ ಸಂಧಾನ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 05-10-2021 ರಂದು ನಾನು ಪೋಲಿಸ ಠಾಣೆಯಲ್ಲಿ ಇದ್ದೆ. ದೂರು ನೀಡಲು ಎಷ್ಟು ಜನರು ಬಂದಿದ್ದರು ಎಂದು ನನಗೆ ನೆನಪಿಲ್ಲ. ನಿಪಿ-1 ರ ದೂರಿನಲ್ಲಿ ಚಾಸಾ-1ರವರ ಹೆಬ್ಬೆರಳಿನ ಗುರುತು ಇದೆ ಎಂದರೆ ಸರಿ. ದೂರು ನೀಡುವ ಸಮಯಕ್ಕೆ ಚಾಸಾ-1ರವರಿಗೆ ಕಿವಿ ಕೇಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಠಾಣೆಯಲ್ಲಿ ಸಾಯಂಕಾಲ 5.30 ರಿಂದ 7 ಗಂಟೆವರೆಗೆ ಇದ್ದರು. ಘಟನೆಯಾದ ಸ್ಥಳದ ಮನೆ ಸಂಖ್ಯೆ ನನ್ನ ಅಂತಿಮ ವರದಿಯಲ್ಲಿ ಉಲ್ಲೇಖ ಮಾಡಿಲ್ಲ. ನನ್ನ ತನಿಖೆಯಲ್ಲಿ ಆರೋಪಿಯ ಮನೆ ಇರುವ ಬಗ್ಗೆ ಅಂತಿಮ ವರದಿಯಲ್ಲಿ ದಾಖಲೆಗಳು ಇಲ್ಲ ಎಂದರೆ ಸರಿ. ನಿಪಿ-3 ರ ನಕಾಶೆಯಲ್ಲಿ ತೋರಿಸಿದಂತೆ ಮನೆಯ ಹಿಂದೆ ಶೌಚಾಲಯ ಇದ್ದ ಕಾರಣ ಶೌಚಾಲಯಕ್ಕೆ ಹೋರಗೇ ಹೋಗುವ ಪ್ರಶ್ನೆ ಬರುವುದಿಲ್ಲ ಎಂದರೆ ಸಾಕ್ಷಿ ಸದರಿ ಶೌಚಾಲಯ ಬಂದು ಇತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಸಾರ್ಜಜನಿಕ ಶೌಚಾಲಯಗಳು ಗ್ರಾಮ ಪಂಚಾಯಿತಿ ಅಡಿ ಬರುತ್ತವೆ ಎಂದರೆ ಸರಿ. ಸದರಿ ಶೌಚಾಲಯ ಬಂದು ಇದೆ ಎಂದು ನನ್ನ ಅಂತಿಮ ವರದಿಯಲ್ಲಿ ಉಲ್ಲೇಖವಿಲ್ಲ.

1ನೇ ಆರೋಪಿ ಮಾಜಿ ಸೈನಿಕ ಇದ್ದರು ಎಂದರೆ ಸರಿ. 1ನೇ ಆರೋಪಿಯ ವಯಸ್ಸು 60 ವರ್ಷದ ಮೇಲೆ ಇದೆ ಎಂದರೆ ಸಾಕ್ಷಿ 48 ವರ್ಷ ವಯಸ್ಸು ಇದೆ ಎಂದು ನುಡಿಯುತ್ತಾರೆ. 1ನೇ ಆರೋಪಿಗೆ ವಯಸ್ಸಾದ ಕಾರಣ ಅವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಪೇನ್ನು, ಪೇಪರ, ಲ್ಯಾಪಟಾಪ ಹಾಗೂ ಇತ್ಯಾದಿ ಸಾಮಾನುಗಳು ತೆಗೆದುಕೊಂಡು ಹೋಗಿದ್ದೇವು. ಆ ದಿನ ಪ್ರಿಂಟರ ತೆಗೆದುಕೊಂಡು ಹೋಗಿರುತ್ತಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಪ್ರೆಂಡ್ರೈವ ತೆಗೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ಹಾಗಿದ್ದೇರೆ ಸ್ಥಳದಲ್ಲಿ ಹೇಳಿಕೆಯನ್ನು ಪಡೆದು ಠಾಣೆಗೆ ಬಂದು ಪ್ರಿಂಟ ತೆಗೆದಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಸರಿ ಎಂದು ನುಡಿಯುತ್ತಾರೆ. ನಾನು ಯಾವುದೇ ಹೇಳಿಕೆಯನ್ನು ಪಡೆದಿಲ್ಲ ಮತ್ತು ಠಾಣೆಯಲ್ಲಿ ಕುಳಿತು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಆರೋಪಿಯ ಮನೆ ಮತ್ತು ಘಟನಾ ಸ್ಥಳ ಎಷ್ಟು ದೂರದಲ್ಲಿ ಇದೆ ಎಂದು ಉಲ್ಲೇಖ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವು ಹತ್ತಿರ ಇವೆ ಎಂದು ನುಡಿಯುತ್ತಾರೆ. ಘಟನ ಸ್ಥಳ ಹಣಾದಿ ಇದೆ. ಈ ರೀತಿ ಹಣಾದಿ ಇದೆ ಎಂದು ಪಂಚನಾಮೆಯಲ್ಲಿ ಉಲ್ಲೇಖವಿಲ್ಲ. ಯಾವುದೇ ಘಟನೆಯಾಗದೇ ಇದ್ದರು ಸಹ ಸುಳ್ಳು ಪಂಚನಾಮೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ.

ಚಾಸಾ-1ರವರು ತಮ್ಮ ಸಂಬಂಧಿಕರ ಸಹಾಯದಿಂದ ನನ್ನ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ.**